
32 ಪರೀಕ್ಷೆ ಫೇಲಾದ ಬಳಿಕ

34 ಮರಣದ ಹೆದ್ದಾರಿಯ ರೋಚಕ ಪಯಣ

40 ಜನರೇ ಕಟ್ಟಿದ ಸೇತುವೆ


ಸುಧಾ

11 ಆಗಸ್ಟ್ 2011 ಬೆಲೆ: ರೂ. 12



# ಸಾವಿರ ದ್ವೀಪಗಳು!


## ಮಧುಚಂದ್ರದ ಮೋಹಕ ತಾಣ



# ಸಾವಿರ ದ್ವೀಪಗಳು!

ಇಲ್ಲಿ ಪ್ರಣಯಕ್ಕೊಂದು ತಾಣ, ಮದುವೆಗೊಂದು ಅರಮನೆ, ಮಧುಚಂದ್ರಕ್ಕೊಂದು ದ್ವೀಪ! ಸಾವಿರ ಕನಸುಗಳ ಸಾವಿರ ದ್ವೀಪಗಳು! ನೀವು ನಿಜವಾದ ಪ್ರವಾಸಿಯೇ ಆಗಿದ್ದಲ್ಲಿ, ಈ ದ್ವೀಪಗಳನ್ನು ಜೀವಮಾನದಲ್ಲಿ ಒಮ್ಮೆಯಾದರೂ ನೋಡಲೇಬೇಕು.

ಚಿತ್ರ, ಲೇಖನ:
ವಿ. ಪ್ರದೀಪ್ ಕುಮಾರ್



ಹುಣ್ಣಿಮೆಯ ಬೆಳದಿಂಗಳು; ಪ್ರಶಾಂತ, ನಿರ್ಮಲ ವಾತಾವರಣ. ನಿಮಗೆಂದೇ ಮೀಸಲಾದ ಆಧುನಿಕ ಸೌಕರ್ಯಗಳ ಒಂಟಿ ಬಂಗಲೆ; ಸುತ್ತಲೂ ಮನತಣಿಸುವ ಹೇರಳ ಜಲರಾಶಿ. ಅವುಗಳ ನಡುವೆಯೇ ಕಣ್ಣುಂಬುವ ಹಸಿರಿನ ವನರಾಶಿ. ತಂಪು ತಂಗಾಳಿಯ ತಾಣದಲ್ಲಿ ನೀವು ಮತ್ತು ನಿಮ್ಮ ಪ್ರಿಯತಮೆ ಮಾತ್ರ! ನಿಮ್ಮ ಏಕಾಂತಕ್ಕೆ, ನಿಮ್ಮದೇ ಸವಿಸಮಯಕ್ಕೆ ಅಡ್ಡಿಯಾಗಲು ದೂರದಲ್ಲೂ ಯಾರೂ ಇಲ್ಲ.

ಮಧುಚಂದ್ರ ಜೀವನದಲ್ಲಿ ಒಮ್ಮೆ ಮಾತ್ರ ಆಗುತ್ತದೆ... ಎಂದು ಯಾರು ಹೇಳಿದವರು? ಇಂತಹ ಅಪರೂಪದ, ಏಕಾಂತದ ತಾಣ ಇದ್ದರೆ ಜೀವನದಲ್ಲಿ ವರ್ಷಕ್ಕೊಮ್ಮೆಯಾದರೂ ಮತ್ತೆ ಮತ್ತೆ ಮಧುಚಂದ್ರ ಅನುಭವಿಸಬಹುದು. ಪ್ರತಿ ವರ್ಷ ಯುಗಾದಿ ಬರುವಂತೆ, ಪ್ರತಿ ವರ್ಷ ವಸಂತ ಮಾಸ ಬರುವಂತೆ ಪ್ರತಿ ವರ್ಷವೂ ಜೀವನದಲ್ಲಿ ಮಧುಚಂದ್ರ! ಹೇಗಿದೆ ಕಲ್ಪನೆ?

ಈ ಕಲ್ಪನೆ ಚಿಗುರೊಡೆಯಲೂ ಕಾರಣವಿದೆ. ಸಾವಿರ ದ್ವೀಪಗಳೆಂಬ ಈ ತಾಣ ಅಷ್ಟೊಂದು ರೊಮ್ಯಾಂಟಿಕ್ ಆಗಿದೆ. ಇಲ್ಲಿ ಒಮ್ಮೆ ಬಂದವರು ಮತ್ತೊಮ್ಮೆ ಬರಬೇಕು ಎಂದುಕೊಳ್ಳುತ್ತಾರೆ. ಜಗತ್ತಿನ ಎಲ್ಲ ಜಂಜಾಟಗಳಿಂದ ದೂರವಾಗಿ, ಪ್ರಕೃತಿಯ ಸ್ವಚ್ಛ, ಶುದ್ಧ ವಾತಾವರಣದಲ್ಲಿ, ಪ್ರಿಯತಮೆಯ ಜತೆ ಇಡೀ ಜಗತ್ತೇ ತನ್ನದು ಎಂದುಕೊಳ್ಳುತ್ತಾ, ಏಕಾಂತ ಮತ್ತು ಲೋಕಾಂತದ ಎಲ್ಲ ಸೌಂದರ್ಯವನ್ನೂ, ಅನುಭೂತಿಯನ್ನೂ ಅನುಭವಿಸಲು ಇದೊಂದು ಅದ್ಭುತ ತಾಣ.

ಕೆನಡಾ ಮತ್ತು ಅಮೆರಿಕಾ ದೇಶಗಳ ಮಧ್ಯದಲ್ಲಿದೆ ಈ ದ್ವೀಪ ಸಮೂಹ. ಹೆಸರು ಥೌಸೆಂಡ್ ಐಲ್ಯಾಂಡ್ಸ್. ಹೆಸರಿಗೆ ತಕ್ಕಂತೆ ಸಾವಿರಾರು ದ್ವೀಪಗಳು. ಇಲ್ಲಿನ ಮೂಲ ನಿವಾಸಿಗಳು ಈ ಪ್ರದೇಶವನ್ನು ಮಾನಿಟೋನ ಎಂದು ಕರೆಯುತ್ತಿದ್ದರು. ಅಂದರೆ 'ಎ ಗಾರ್ಡನ್ ಆಫ್ ದಿ ಗ್ರೇಟ್ ಸ್ಪಿರಿಟ್' ಎಂದರ್ಥ. ಅಮೆರಿಕಾದ ಸ್ವಾತಂತ್ರ್ಯ ಕ್ರಾಂತಿಯ ಬಳಿಕ ಬ್ರಿಟಿಷರ ಬಗ್ಗೆ ಇನ್ನೂ ಒಲವು ಇಟ್ಟುಕೊಂಡಿದ್ದ ಜನರು ಈ ದ್ವೀಪಗಳಿಗೆ ವಲಸೆ ಬಂದರು. ಅವರೇ ಇಲ್ಲಿನ ಮೂಲನಿವಾಸಿಗಳು.

ದ್ವೀಪ ಎಂದರೆ ಇಲ್ಲಿ ನಮ್ಮಲ್ಲಿಯ ದ್ವೀಪಗಳಂತೆ ವಿಶಾಲ ಭೂಪ್ರದೇಶವಲ್ಲ. ಇಲ್ಲಿ ದ್ವೀಪದ ವ್ಯಾಖ್ಯಾನವೆಂದರೆ, ವರ್ಷವಿಡೀ ಸುತ್ತಲೂ ನೀರಿದ್ದು, ಕನಿಷ್ಠ ಒಂದು ಚದರ ಅಡಿಯಷ್ಟಾದರೂ ಭೂಮಿಯಿರಬೇಕು; ಅಂದರೆ ಒಂದು ಗಿಡ, ಮರಕ್ಕೆ ಸಾಕಾಗುವಷ್ಟು! ಇಲ್ಲಿ ಒಂದೇ ಮರವಿರುವ, ಒಂದೇ ಮನೆಯಿರುವ 'ಜಸ್ಟ್ ರೂಮ್ ಇನಫ್' ಎನ್ನಬಹುದಾದ ಪುಟ್ಟದಾದ ದ್ವೀಪಗಳೂ ಇವೆ; ಹಾಗೆಯೇ ವಿಸ್ತಾರವಾದ ದ್ವೀಪಗಳೂ ಇವೆ.

ಇದೊಂದು ವಿಸ್ಮಯಲೋಕವೇ ಸರಿ. ಇಂತಹ ಅಪರೂಪದ ತಾಣಕ್ಕೆ ಪಯಣಿಸಿದ ನಾವು ನಿಜಕ್ಕೂ ಭಾಗ್ಯಶಾಲಿಗಳು. ಟೊರೆಂಟೊ ನಗರದಿಂದ ಒಂದು ಗಂಟೆಯ ಪ್ರಯಾಣದ ನಂತರ ನಾವು ಕಿಂಗ್‌ಸ್ಟನ್ ಸಮೀಪದ ಗನನೋಕ್ವೆಯೆಂಬ ಪುಟ್ಟ ಪಟ್ಟಣ ಸೇರಿದಾಗ ಬೆಳಗ್ಗೆ 11 ಗಂಟೆ. ಆದರೆ ಅಲ್ಲಿಂದ ನಮ್ಮ 'ಕ್ರೂಸ್' ಇದ್ದದ್ದು ಮಧ್ಯಾಹ್ನ 12ಕ್ಕೆ. ಹಾಗಾಗಿ ಪಟ್ಟಣದಲ್ಲೇ ಸುತ್ತಮುತ್ತ ಓಡಾಡಿ ನೆನಪಿನ ಕಾಣಿಕೆಗಳನ್ನು ಖರೀದಿಸಿದೆ.

ಹಾಗೆ ಓಡಾಡಿ ಶಾಪಿಂಗ್ ಮಾಡುತ್ತಿದ್ದಾಗ, ಒಂದು ಕುತೂಹಲಕಾರಿ ವಿಷಯ ತಿಳಿಯಿತು. ಕಾಣಿಕೆಗಳನ್ನು ಖರೀದಿಸಿದ ನಂತರ ಆ ಅಂಗಡಿಯ ಮಾರಾಟಗಾರ್ತಿ 'ನಿಮ್ಮಲ್ಲೊಂದು ಲೂನಿ ಇದೆಯೇ?' ಎಂದು ನನ್ನನ್ನು ಪ್ರಶ್ನಿಸಿದಳು. ಲೂನಿ ಎಂದರೆ ಏನೆಂದು ನನಗೆ ತಿಳಿಯಲಿಲ್ಲ. ಆಮೇಲೆ ನಗದು ಪೆಟ್ಟಿಗೆಯಿಂದ ಒಂದು ಕೆನಡಿಯನ್ ಡಾಲರ್ ತೆಗೆದು ಆಕೆ ವಿವರಿಸಿದಳು. ಚಿನ್ನದ ಬಣ್ಣದ, ಕಂಚಿನ ಲೇಪನದ ಕೆನಡಾದ ಆ ಒಂದು ಡಾಲರ್ ನಾಣ್ಯದ ಮೇಲೆ ಲೂನ್ ಎಂಬ ಹಕ್ಕಿಯ ಚಿತ್ರವಿದೆ. ಆದ್ದರಿಂದ, ಒಂದು ಡಾಲರಿನ ಕೆನಡಾ ನಾಣ್ಯವನ್ನು ಲೂನಿ ಎಂದೂ ಕರೆಯುತ್ತಾರೆ!

ಪ್ರವಾಸ ಹೋಗಿದ್ದ ನಮ್ಮ ಗುಂಪಿನಲ್ಲಿ ಬಹಳಷ್ಟು ಮಂದಿ ಸಸ್ಯಾಹಾರಿಗಳು. ಹತ್ತಿರದಲ್ಲೇ ಇದ್ದ ರೆಸ್ಟೋರೆಂಟಿನಲ್ಲಿ ನಮ್ಮ ಟೂರ್ ಮಾರ್ಗದರ್ಶಕರು ಸಸ್ಯಾಹಾರಿ ಪಿಟ್ಜಾದ ವ್ಯವಸ್ಥೆಯನ್ನೂ ಮಾಡಿದ್ದರು. ನಮ್ಮ ಪ್ರವಾಸ ಎಷ್ಟೊಂದು ವ್ಯವಸ್ಥಿತವಾಗಿತ್ತು ಎನ್ನುವುದಕ್ಕೆ ಇದೊಂದು ನಿದರ್ಶನ ಮಾತ್ರ.


### ಸುಸಜ್ಜಿತ ಕ್ರೂಸ್

ಮಧ್ಯಾಹ್ನ 12ಕ್ಕೆ ನಮ್ಮ ಕ್ರೂಸ್ ನೀಲ ನೀರಿನಲ್ಲಿ ತೇಲಿ ಹೊರಟಿತು. ಕ್ರೂಸ್‌ನಲ್ಲಿ ಸುಮಾರು 80 ಪ್ರವಾಸಿಗರಿದ್ದರು. ಒಂದು ಓಪನ್ ಡೆಕ್, ಕೆಫೆ ಮತ್ತು ಎರಡು ಹವಾ ನಿಯಂತ್ರಿತ ಡೆಕ್‌ಗಳಿಂದ ಸುಸಜ್ಜಿತವಾದ ಸ್ಪೀಡ್‌ಬೋಟ್ ಇದು. 1000 ದ್ವೀಪಗಳ ಬಗ್ಗೆ ವಿವರಿಸಲು ಧ್ವನಿವರ್ಧಕದ ವ್ಯವಸ್ಥೆಯೂ ಇತ್ತು.


ಬೋಲ್ಟ್ ಕ್ಯಾಸಲ್ ಥೌಸೆಂಡ್ ಹಾರ್ಟ್ ಐಲ್ಯಾಂಡ್‌ನ ಮುಖ್ಯ ಆಕರ್ಷಣೆ

ಈ ಸಾವಿರ ದ್ವೀಪಗಳು ಹೀಗೆ ಒಂಟಿ ಒಂಟಿಯಾಗಿ ಉದ್ಭವಿಸಿದ್ದು ಹೇಗೆ ಎನ್ನುವುದೂ ಕುತೂಹಲಕರ. ಈ ಪ್ರದೇಶ ಆರ್ಕ್‌ಟಿಕ್ ಸಾಗರಕ್ಕೆ ಸಮೀಪವಿದ್ದು, ಸಾವಿರಾರು ವರ್ಷಗಳ ಹಿಂದೆ, ನೀರ್ಗಲ್ಲಿನ ಪರ್ವತಗಳ ಗ್ಲೇಸಿಯರ್ ಕೊರೆತದಿಂದಾಗಿ ಸಾವಿರಾರು ಪುಟ್ಟ ಪುಟ್ಟ ದ್ವೀಪಗಳು ಉದ್ಭವಿಸಿದುವಂತೆ. ಹಿಮಯುಗದ ಅಂತ್ಯದ ಒಂದು ಪರಿಣಾಮವೇ ಮಹಾ ಸರೋವರಗಳು. ಈ ಮಹಾ ಸರೋವರಗಳಲ್ಲಿ ಮುಖ್ಯವಾದದ್ದು ಒಂಟಾರಿಯೊ.

ಒಂಟಾರಿಯೊ ಸರೋವರದಿಂದ ಶುರುವಾಗಿ ಸುಮಾರು 1197 ಕಿ.ಮೀ.ಗಳಷ್ಟು ದೂರದ ಅಟ್ಲಾಂಟಿಕ್ ಸಾಗರವನ್ನು ಸೇರುವ ಸೇಂಟ್ ಲಾರೆನ್ಸ್ ನದಿಯ ಪ್ರದೇಶದಲ್ಲಿ ಇರುವ 1793 ನೈಸರ್ಗಿಕ ದ್ವೀಪಗಳ ಸಮೂಹವನ್ನೇ 'ಥೌಸೆಂಡ್ ಐಲ್ಯಾಂಡ್ಸ್' ಎಂದು ಕರೆಯಲಾಗುತ್ತದೆ. ಲಾರೆನ್ಸ್ ನದಿಯ ಪಶ್ಚಿಮಕ್ಕೆ ಕೆನಡಾದ



ಒಂಟಾರಿಯೊ ರಾಜ್ಯ ಮತ್ತು ಪೂರ್ವಕ್ಕೆ ಅಮೆರಿಕಾದ ನ್ಯೂಯಾರ್ಕ್ ರಾಜ್ಯಗಳಿವೆ. ಈ ಪ್ರದೇಶಕ್ಕೆ ಎರಡೂ ದೇಶಗಳಿಂದ ಪ್ರವೇಶಿಸಬಹುದು.

ನಮ್ಮ ಕ್ರೂಸ್ ಹೊರಟ ಕೆಲವು ನಿಮಿಷಗಳಲ್ಲೇ ಈ ದ್ವೀಪರಾಶಿಯ ಅಪೂರ್ವ ಸೌಂದರ್ಯ ಮತ್ತು ನಿಸರ್ಗ ವೈವಿಧ್ಯ ನಮ್ಮೆಲ್ಲರನ್ನು ಬೆರಗಾಗಿಸಿತು. ವಿವಿಧ ಆಕಾರದ ಮತ್ತು ಸುತ್ತಳತೆಯ ದ್ವೀಪಗಳ ದೃಶ್ಯಗಳನ್ನು ನೋಡುತ್ತಿದ್ದರೆ ನಾವೆಲ್ಲೋ ಸ್ವರ್ಗದಲ್ಲಿದ್ದೇವೆ ಎನ್ನಿಸತೊಡಗಿತು. ಕೇವಲ ಒಂದೇ ಒಂದು ಪುಟ್ಟ ಮನೆಯಿರುವ ದ್ವೀಪಗಳಿಂದ ಹಿಡಿದು ಹೋಟೆಲ್, ರೆಸಾರ್ಟ್‌ಗಳಿರುವ ದ್ವೀಪಗಳೂ ಇಲ್ಲಿವೆ. ಇಲ್ಲಿನ ಅನೇಕ ದ್ವೀಪಗಳು ಶ್ರೀಮಂತರ ಖಾಸಗಿ ಒಡೆತನದಲ್ಲಿವೆ. ಪ್ರಪಂಚದ ಅತ್ಯಂತ ಶ್ರೀಮಂತರ ವಿಲಾಸೀ ಜೀವನದ ಒಳನೋಟ ಕಾಣುವುದು ಈ ದ್ವೀಪಗಳಲ್ಲೇ. ಹಾಲಿವುಡ್‌ನ ಹೆಸರಾಂತ ಚಿತ್ರ ತಾರೆಯರು, ಉದ್ಯಮಿಗಳು, ಪ್ರತಿಷ್ಠಿತ ರಾಜಕಾರಣಿಗಳು, ಜಗದ್ವಿಖ್ಯಾತ ಕ್ರೀಡಾಪಟುಗಳು ಇಲ್ಲಿ ದ್ವೀಪಗಳ ಒಡೆತನ ಹೊಂದಿದ್ದಾರೆ. ಇಲ್ಲಿ ದ್ವೀಪವೊಂದನ್ನು ಖರೀದಿಸಿದ್ದಾನೆ ಎಂದರೆ ಆತ ಜಗತ್ತಿನ ಪ್ರತಿಷ್ಠಿತ ಶ್ರೀಮಂತರ ಕ್ಲಬ್‌ನ ಅತಿ ಮುಖ್ಯ ಸದಸ್ಯನಂತೆಯೇ ಸರಿ.

## 1000 ಐಲಾಂಡ್ಸ್ ಅಮೆರಿಕಾ/ಕೆನಡಾ

| | |
|---|---|
| ದ್ವೀಪಗಳು | ಒಟ್ಟು 1793 |
| ಹತ್ತಿರದ ನಗರಗಳು, ಪ್ರಯಾಣದ ಸಮಯ | ಬಫೆಲೊ 4 ಗಂಟೆ<br>ನ್ಯೂಯಾರ್ಕ್ 6.5 ಗಂಟೆ<br>ಟೊರೆಂಟೊ 3 ಗಂಟೆ<br>ಮಾಂಟ್ರಿಯಲ್ 2.5 ಗಂಟೆ |
| ವಾತಾವರಣ | ಕನಿಷ್ಠ –15 ಡಿ. ಸೆಂ. ಜನವರಿ;<br>ಗರಿಷ್ಠ +25 ಡಿ.ಸೆಂ. ಜುಲೈ |
| ಹೋಟೆಲ್ ಇಬ್ಬರಿಗೆ | ದಿನಕ್ಕೆ 90 ರಿಂದ (ಡಾಲರ್) |
| ದ್ವೀಪಗಳ ಬಂಗಲೆಗಳು 4 ಜನರಿಗೆ | ವಾರಕ್ಕೆ 600 ರಿಂದ |
| ಕ್ಯಾಂಪಿಂಗ್ 4 ಜನರಿಗೆ | ದಿನಕ್ಕೆ 25 ರಿಂದ |
| ಅಂದಾಜು ಪ್ರಯಾಣದ ವೆಚ್ಚ | |
| ಬೆಂಗಳೂರು–ಟೊರೆಂಟೊ–ಬೆಂಗಳೂರು | ರೂ 69,000 |
| ಬೆಂಗಳೂರು–ನ್ಯೂಯಾರ್ಕ್–ಬೆಂಗಳೂರು | ರೂ 58,000 |



ಉಳಿದುಕೊಳ್ಳಲು ಕಾಟೇಜ್

## ಜಾರ್ಜ್ ಮತ್ತು ಲೂಯಿಸ್ ಪ್ರೇಮ ಕತೆ

ಇಲ್ಲಿರುವ ಸಾವಿರಾರು ದ್ವೀಪಗಳಲ್ಲಿ ಎಲ್ಲವೂ ನೋಡಲು ಅರ್ಹವೇ. ಆದರೆ ನೋಡಲೇಬೇಕಾದದ್ದು ಅಮೆರಿಕಾ ಪ್ರದೇಶದ ಹಾರ್ಟ್ ಐಲ್ಯಾಂಡ್. ಈ ದ್ವೀಪದಲ್ಲಿನ ಬೋಲ್ಟ್ ಕ್ಯಾಸೆಲ್ ಕಥೆ ಕೇಳಿದಾಗ ನಮ್ಮ ತಾಜ್‌ಮಹಲ್ ಕಟ್ಟಿದ ಚಕ್ರವರ್ತಿ ಶಹಜಹಾನ್‌ನ ನೆನಪಾಯಿತು.

ನ್ಯೂಯಾರ್ಕಿನ ಪಂಚತಾರಾ ಹೋಟೆಲ್‌ಗಳಲ್ಲೇ ಅತ್ಯಂತ ಪ್ರತಿಷ್ಠಿತ ಮತ್ತು ಖ್ಯಾತಿ ಹೊಂದಿದ ಹೋಟೆಲ್ ಅಂದರೆ ವಾಲ್ಡ್ರಾರ್ಫ್ ಅಸ್ಟೋರಿಯ. ಇದರ ಪಾಲುದಾರರಾದ ಆಗರ್ಭ ಶ್ರೀಮಂತ ಜಾರ್ಜ್ ಸಿ. ಬೋಲ್ಟ್ 1900ರಲ್ಲಿ ಹಾರ್ಟ್ ಐಲ್ಯಾಂಡಿನಲ್ಲಿ 120 ಕೋಣೆಗಳ ಬೃಹತ್ ಅರಮನೆಯನ್ನು ತಮ್ಮ ಹೆಂಡತಿ ಲೂಯಿಸ್‌ಗಾಗಿ ನಿರ್ಮಿಸಲು ಪ್ರಾರಂಭಿಸಿದರು. ಭವ್ಯ ನೋಟದ, ಸುಂದರ ಗ್ರಾನೈಟಿನ ಈ ಅರಮನೆಯ ಆವರಣದಲ್ಲಿ ಇಟಾಲಿಯನ್ ಉದ್ಯಾನವನ, ಸೊಗಸಾದ ಸೇತುವೆ, ಕುತೂಹಲ ಕೆರಳಿಸುವ ಸುರಂಗ ಮಾರ್ಗ, ವಿದ್ಯುತ್ ಉತ್ಪಾದನಾ ಕೇಂದ್ರ ಇತ್ಯಾದಿಗಳ ನಿರ್ಮಾಣಕ್ಕೆ ಸುಮಾರು 300 ಜನ ಶ್ರಮಿಸುತ್ತಿದ್ದರು.

ಆದರೆ ಅರಮನೆ ನಿರ್ಮಾಣದ ಕೆಲಸ ನಡೆಯುತ್ತಿದ್ದಂತೆಯೇ 1904ರಲ್ಲಿ ಹಠಾತ್ತಾಗಿ ಲೂಯಿಸ್ ಮರಣ ಹೊಂದಿದರು. ಅತೀವ ದುಃಖಕ್ಕೆ ಒಳಗಾದ ಬೋಲ್ಟ್ ಅರಮನೆಯ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಿದರು. ಲೂಯಿಸ್ ಸಾವಿನಿಂದ ಕೊರಗುತ್ತಿದ್ದ ಬೋಲ್ಟ್ ಆ ಬಳಿಕ ಹಾರ್ಟ್ ಐಲ್ಯಾಂಡಿಗೆ ಕಾಲಿಡಲೇ ಇಲ್ಲ. ಆದರೆ ತನ್ನ ಪ್ರೀತಿಪಾತ್ರ ಮಡದಿಯ ಸಲುವಾಗಿ ಕಟ್ಟಿದ ಅಪೂರ್ಣ ಅರಮನೆಯನ್ನು ಮಡದಿಯ ಸ್ಮಾರಕ ಎಂಬಂತೆ ಹಾಗೆಯೇ ಉಳಿಸಿಕೊಂಡರು.

ಸುಮಾರು 73 ವರ್ಷಗಳ ಕಾಲ ಅಪೂರ್ಣ ಅರಮನೆ ಹಾಗೆಯೇ ಉಳಿಯಿತು. ಆದರೆ ಯಾವುದೆ ನಿರ್ವಹಣೆ ಇಲ್ಲದೆ ನಿರ್ಲಕ್ಷ್ಯದಿಂದಾಗಿ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಅರಮನೆ ಶಿಥಿಲಗೊಂಡಿತ್ತು.

1977ರಲ್ಲಿ ಅಸ್ತಿತ್ವಕ್ಕೆ ಬಂದ 1000 ಐಲ್ಯಾಂಡ್ಸ್ ಬ್ರಿಡ್ಜ್ ಸಂಸ್ಥೆ ಈ ಆಸ್ತಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅರಮನೆಯ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗೆ ಕೋಟ್ಯಾಂತರ ಡಾಲರುಗಳನ್ನು ವೆಚ್ಚ ಮಾಡಿತು. ಈಗ ಮತ್ತೆ ತನ್ನ ಹಳೆಯ ಸೌಂದರ್ಯವನ್ನು ಮರಳಿ ಪಡೆದಿರುವ ಅರಮನೆ ಪ್ರವಾಸಿಗರ ಸಂದರ್ಶನಕ್ಕೆ ತೆರೆದು ನಿಂತಿದೆ. ಒಂದು ಅಪರೂಪದ ಪ್ರೇಮಕಥೆಯನ್ನು ಪ್ರತಿಬಿಂಬಿಸುವ ಈ ದ್ವೀಪಕ್ಕೆ 'ಹಾರ್ಟ್ ಐಲ್ಯಾಂಡ್' ಎಂಬ ಹೆಸರು ಇಟ್ಟಿರುವುದೂ ಅರ್ಥಪೂರ್ಣವಾಗಿದೆ. ಈ ಅದ್ಭುತವಾದ ಬೋಲ್ಟ್ ಕ್ಯಾಸೆಲ್ ಥೌಸೆಂಡ್ ಐಲ್ಯಾಂಡ್ಸ್‌ನ ಅತಿ ಮುಖ್ಯ ಆಕರ್ಷಣೆ.

## ಮದುವೆಗೊಂದು ಅರಮನೆ; ಮಧುಚಂದ್ರಕ್ಕೊಂದು ದ್ವೀಪ!

ಶ್ರೀಮಂತರ ಈ ಪ್ರತಿಷ್ಠಿತ ದ್ವೀಪ ಸಮೂಹಗಳಲ್ಲಿ ಪ್ರವಾಸಿಗರಿಗೆ ಪ್ರವೇಶ ಎಲ್ಲಿದೆ ಎಂಬ ಪ್ರಶ್ನೆ ಬೇಡ. ಹಾಗೆಯೇ ಇದೇನೋ ದುಬಾರಿ ಪ್ರವೇಶ ಶುಲ್ಕ ಇರುವ ಜಾಗ ಇರಬೇಕು ಎಂಬ ಅನುಮಾನವೂ ಬೇಡ. ಮುಂದುವರಿದ ದೇಶಗಳ ಕುಸಿದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಕೆಲವೊಮ್ಮೆ ಇಲ್ಲಿನ ಸೌಕರ್ಯಗಳು ಬಹಳ ಅಗ್ಗವೆನಿಸಿ ಅಚ್ಚರಿಯಾಗುವುದೂ ಇದೆ. ಈಗ ಬೋಲ್ಟ್ ಕ್ಯಾಸೆಲ್‌ನ ಆವರಣ ನೀವು ಮದುವೆ ಸಮಾರಂಭಗಳನ್ನು ಏರ್ಪಡಿಸುವುದಿದ್ದರೆ ಬಾಡಿಗೆಗೂ ಲಭ್ಯ! ಭಾರೀ ದುಬಾರಿ ಬಾಡಿಗೆ ಅಂದಿರಾ? ಖಂಡಿತಾ ಇಲ್ಲ– ಮದುವೆ ಸಮಾರಂಭಕ್ಕೆ ಬೋಲ್ಟ್ ಕ್ಯಾಸೆಲ್‌ನ ಆವರಣದ ಬಾಡಿಗೆ ಕೇವಲ 150 ಡಾಲರ್–ಅಂದರೆ ಬರೀ 7000 ರೂಪಾಯಿ! (ಬೆಂಗಳೂರಿನಲ್ಲಿ ಅರಮನೆಯಂತೆ ಕಾಣಿಸುವ ಛತ್ರಗಳ ಬಾಡಿಗೆ 1–2 ಲಕ್ಷ ರೂಪಾಯಿ ದಾಟಿರುವುದು ನೆನಪಾಯಿತೆ?) ಅದೂ ಅಲ್ಲದೆ, ಈ ಮದುವೆ ಸಮಾರಂಭದಲ್ಲಿ ಪ್ರತಿಯೊಬ್ಬ ಅತಿಥಿಗೂ ತಗಲುವ ಸಾಮಾನ್ಯ ಪ್ರವೇಶ ಶುಲ್ಕ ಕೇವಲ 7 ಡಾಲರ್! ನಿಮ್ಮ ಮದುವೆಗೆ ಬರುವ ಬಂಧು, ಮಿತ್ರರಿಗೆ ಊಟ, ವಸತಿ, ಪ್ರಯಾಣ ಇತ್ಯಾದಿಗಳನ್ನು ಸಂಘಟಿಸಲು, ಸಮಾರಂಭ ಸ್ಮರಣೀಯವಾಗುವಂತೆ



ದ್ವೀಪಗಳ ಮಧ್ಯೆ ಸ್ಪೀಡ್ ಬೋಟ್ ಪಯಣ

ಮಾಡಲು ಇಲ್ಲಿ ವಿಶೇಷ ಆಯೋಜಕರೂ ಇದ್ದಾರೆ.

ಹಲವು ದ್ವೀಪಗಳು ಇಲ್ಲಿ ಹೋಟೆಲ್‌ನಂತೆ ಬಾಡಿಗೆಗೆ ಉಳಿದುಕೊಳ್ಳಲು ಸಿಗುತ್ತವೆ. ಬಾಡಿಗೆ ದಿನಕ್ಕೆ ಕೇವಲ 4000 ರೂಪಾಯಿ ಇರುವಂತಹದ್ದೂ ಇವೆ. ನಿಮ್ಮ ಅಭಿರುಚಿ, ಪರ್ಸ್ ಸಾಮರ್ಥ್ಯಕ್ಕೆ ತಕ್ಕಂತೆ ಬಾಡಿಗೆ ಹೆಚ್ಚಾಗುತ್ತಾ ಹೋಗುತ್ತದೆ. ಬೇರೆ ಬೇರೆ ರೀತಿಯ ಪ್ಯಾಕೇಜ್‌ಗಳು ಲಭ್ಯವಿವೆ. ಖಾಸಗೀ ದ್ವೀಪಗಳ ಬಂಗಲೆಗಳು, ಹೋಟೆಲ್, ರೆಸಾರ್ಟ್‌ಗಳಲ್ಲಿ ಆಧುನಿಕ ಜೀವನಕ್ಕೆ ಬೇಕಾಗುವ ಸಂಸ್ಕರಿಸಿದ ನೀರು, ವಿದ್ಯುತ್, ಅಡುಗೆ ಅನಿಲ ಇತ್ಯಾದಿಗಳ ಸೌಕರ್ಯವಿದೆ. ಇಡೀ ಸಂಸಾರವೇ ಹೋಗಿ ಅಲ್ಲಿ ಕೆಲವು ದಿನಗಳ ಕಾಲ ಸ್ವಂತ ಮನೆ ಎಂದೇ ಭಾವಿಸಿ (ಬರೇ ಭಾವಿಸಿ) ಉಳಿದುಕೊಳ್ಳಬಹುದು. ಮೊಬೈಲ್ ಹಾಗೂ ಇಂಟರ್ನೆಟ್ ಸಂಪರ್ಕವೂ ಅಡೆತಡೆ ಇಲ್ಲದೆ ಸಿಗುವುದರಿಂದ, ಊರಿಗೂ ಸಂಪರ್ಕ ಇರುತ್ತದೆ. ಅಲ್ಲದೆ ಇಲ್ಲಿನ ಬಯಲುಗಳಲ್ಲಿ, ಪ್ರಕೃತಿಯ ಮಡಿಲಲ್ಲಿ ಕ್ಯಾಂಪಿಂಗ್ ಮಾಡುವ ಅವಕಾಶಗಳೂ ಇವೆ.

ಈ ಪ್ರದೇಶದಲ್ಲಿ ಅನೇಕ ಪ್ರವಾಸೀ ಆಕರ್ಷಣೆಗಳಿವೆ. ಬೋಲ್ಟ್ ಕ್ಯಾಸೆಲ್ ಅಲ್ಲದೆ, ಕೆನಡಾ ಪ್ರದೇಶದ ಥೌಸೆಂಡ್ ಐಲ್ಯಾಂಡ್ಸ್ ರಾಷ್ಟ್ರೀಯ ಉದ್ಯಾನವನವಿದೆ. ಒಟ್ಟು 20 ದ್ವೀಪಗಳ ಸಮೂಹದಲ್ಲಿ ವಿಸ್ತರಿಸಿರುವ ಈ ಉದ್ಯಾನವನದಲ್ಲಿ ಅತ್ಯಂತ ವಿರಳ ಮತ್ತು ವೈವಿಧ್ಯ ವನ್ಯಜೀವಿಗಳನ್ನು ನೋಡಬಹುದು. ಎರಡೂ ರಾಷ್ಟ್ರಗಳಿಗೆ ಸೇರಿದ ಇನ್ನೂ ಹಲವಾರು ಉದ್ಯಾನವನಗಳು ಇಲ್ಲಿವೆ. ಅಮೆರಿಕಾದ ಕ್ಲೆಟನ್‌ಗೆ ಸಮೀಪದಲ್ಲಿ ಅತ್ಯಂತ ಪುರಾತನವಾದೊಂದು ಬೋಟ್ ಸಂಗ್ರಹಾಲಯವಿದೆ. ಈ ನೈಸರ್ಗಿಕ ಅದ್ಭುತ ಮತ್ತು ಸಾಂಸ್ಕೃತಿಕ ಸಂಪತ್ತಿಗೆ ಯುನೆಸ್ಕೊ ಸಂಸ್ಥೆಯ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲೂ ಸ್ಥಾನ ಸಿಕ್ಕಿದೆ. ಈ ಪ್ರದೇಶದ ಅಭಿವೃದ್ಧಿ ಮತ್ತು ವಿಕಾಸಕ್ಕಾಗಿ ಎರಡೂ ದೇಶಗಳ ಜಂಟಿ ಆಶ್ರಯದ ಸಂಸ್ಥೆಯೊಂದು ಶ್ರಮಿಸುತ್ತಿದೆ.

ಫಲವತ್ತಾದ ಇಲ್ಲಿನ ಪ್ರದೇಶದಲ್ಲಿ ಸಾಕಷ್ಟು ವೈನ್ ತಯಾರಿಕಾ ಕೇಂದ್ರಗಳಿವೆ. ಹಾಗಾಗಿ ಕೆಲವು ವರ್ಷಗಳಿಂದ ನ್ಯೂಯಾರ್ಕ್ ರಾಜ್ಯದ ಕ್ಲೆಟನ್, ಅಲೆಕ್ಸಾಂಡ್ರಿಯ ಮತ್ತಿತರ ದ್ವೀಪಗಳಲ್ಲಿ ವೈನ್ ಪ್ರವಾಸೋದ್ಯಮವೂ ಜನಪ್ರಿಯವಾಗುತ್ತಿದೆ. ಸುಮಾರು 50 ಡಾಲರ್ ಕೊಟ್ಟು ಬುಕ್ ಮಾಡಿದರೆ ಸಾಕು; ಬೆಳಗಿನಿಂದ ಸಂಜೆಯವರೆಗೆ ನಿಮ್ಮ ಪ್ರಯಾಣ, ಊಟದ ಖರ್ಚಿನ ಜೊತೆಗೆ ವೈನ್ ರುಚಿಯನ್ನು ಅನುಭವಿಸುವ ಅವಕಾಶವಿರುತ್ತದೆ; ಹಾಗೆಯೇ ನಿಮಗಿಷ್ಟವಾದ ವೈನ್ ಕೂಡಾ ಖರೀದಿಸಬಹುದು.

## ಅತ್ಯಂತ ಚಿಕ್ಕ ಸೇತುವೆ!

ಕೆನಡಾಗೆ ಸೇರುವ ಝವಿಕಾನ್‌ನಲ್ಲಿ ಪುಟ್ಟದಾದ ಅವಳಿ ದ್ವೀಪಗಳಿವೆ. ಈ ದ್ವೀಪಗಳ ನಡುವೆ ಓಡಾಡಲು ಕೇವಲ 32 ಅಡಿ ಉದ್ದದ ಕಾಲು ಸೇತುವೆಯೊಂದಿದೆ. 'ಇದರಲ್ಲಿ ಸ್ವಲ್ಪ ದೊಡ್ಡ ದ್ವೀಪ ಕೆನಡಕ್ಕೂ ಮತ್ತು ಸಣ್ಣ ದ್ವೀಪ ಅಮೆರಿಕಾಕ್ಕೂ ಸೇರಿದೆ. ಈ ಕಾಲು ಸೇತುವೆ ಜಗತ್ತಿನ ಅತ್ಯಂತ ಚಿಕ್ಕದಾದ ಅಂತರರಾಷ್ಟ್ರೀಯ ಸೇತುವೆ' ಎಂದು ಇಲ್ಲಿನ ಪ್ರವಾಸೋದ್ಯಮದ ಪ್ರತಿನಿಧಿಗಳು ಬಲವಾಗಿ ಪ್ರಚಾರ ಮಾಡುತ್ತಾರೆ. ಆದರೆ ಇದನ್ನು ನಂಬಬೇಡಿ; ಎರಡೂ ದ್ವೀಪಗಳೂ ಕೆನಡಾಗೆ ಸೇರಿರುವುದರಿಂದ ಇದೊಂದು ಬರೀ ಪ್ರಚಾರ ತಂತ್ರ!

ಆಯಾ ಪ್ರವಾಸಿಗರ ಅಭಿರುಚಿಯಂತೆ ಇಲ್ಲಿ ಸವಲತ್ತುಗಳಿವೆ. ಹಾಗೆಯೇ ಬಜೆಟ್‌ಗೆ ತಕ್ಕಂತೆ ಅಪಾರವಾದ ಆಯ್ಕೆಗಳೂ ಇವೆ.

ಮಧುಚಂದ್ರದಂತಹ ಅತ್ಯಂತ ವೈಯಕ್ತಿಕ ಅನುಭವಗಳಿಗೂ, ಏಕಾಂತ ಬಯಸುವ ಹಲವಾರು ಸೃಜನಶೀಲ ಕ್ರಿಯೆಗಳಿಗೂ ಈ ದ್ವೀಪಗಳು ಅತ್ಯಂತ ಸೂಕ್ತ. ಇಂಥ ರಮಣೀಯ ಸ್ಥಳದಲ್ಲಿ ನಿಮ್ಮ ಸಂಗಾತಿಯ ಜೊತೆ ಮನಸೋ ಇಚ್ಛೆಯಂತೆ ದೋಣಿ ವಿಹಾರ ಮಾಡಬಹುದು; ಇಲ್ಲಿರುವ ಸ್ಪಾಗಳಲ್ಲಿ ವಿಶ್ರಾಂತಿ ಪಡೆಯಬಹುದು. ಬಂಗಲೆಯ ಹೊರಗೆ ನಿರ್ಮಲವಾದ ತಂಗಾಳಿಯಲ್ಲಿ, ನಿಮ್ಮ ಮೆಚ್ಚಿನ ಕಾದಂಬರಿಯನ್ನು ಓದುತ್ತಾ ಕೂರಬಹುದು. ಜಗತ್ತಿನ ಜತೆ ಮಾತೇ ಬೇಡ ಎನ್ನುವವರೂ ಇಲ್ಲಿ ದೀರ್ಘ ಮೌನದೊಂದಿಗೆ ಪ್ರಕೃತಿಯ ಜತೆ ಸಂವಾದ ನಡೆಸುತ್ತಾ



## 1000 ದ್ವೀಪಗಳ ಆಕರ್ಷಣೆಗಳು

| | |
|---|---|
| ಹಾರ್ಟ್ ಐಲ್ಯಾಂಡ್ ಅಮೆರಿಕಾ | ಬೋಲ್ಟ್ ಕ್ಯಾಸೆಲ್, ಇಟಾಲಿಯನ್ ಉದ್ಯಾನವನ, ಪವರ್ ಹೌಸ್, |
| ಕ್ಲೆಟನ್ ಅಮೆರಿಕಾ | ಬೋಟ್ ಮ್ಯೂಸಿಯಮ್, 1000 ಐಲಾಂಡ್ಸ್ ಮ್ಯೂಸಿಯಮ್, ಆರ್ಟ್ ಸೆಂಟರ್, |
| ಬ್ರೊಕ್‌ವಿಲ್ ಕೆನಡಾ | ಜಲ ಕ್ರೀಡೆಗಳು, ಗಾಲ್ಫ್, ಪ್ರಾಚೀನ ಕಲಾಕೃತಿಗಳು |
| ಗನನೋಕ್ವೆ ಕೆನಡಾ | ಜಲ ಕ್ರೀಡೆಗಳು, ನಾಟಕಗಳು, ಗಾಲ್ಫ್, ಕ್ಯಾಸಿನೊ, ಬೋಲ್ಟ್ ಕ್ಯಾಸೆಲ್ ಪ್ರವಾಸ |
| ಅಲೆಕ್ಸಾಂಡ್ರಿಯ ಅಮೆರಿಕಾ | ಬೋಟಿಂಗ್, ಹೆಲಿಕಾಪ್ಟರ್ ಸವಾರಿಗಳು, ಬೋಲ್ಟ್ ಕ್ಯಾಸೆಲ್ ಪ್ರವಾಸ, ಟೆನಿಸ್, ರೆಸ್ಟೋರೆಂಟ್‌ಗಳು |
| ಕಿಂಗ್‌ಸ್ಟನ್ ಕೆನಡಾ | ಬೋಟಿಂಗ್, ಟ್ರಾಲಿ ಟೂರ್, ಫ್ಲೋರ್ಟ್ ಹೆನ್ರಿ, ರೆಸ್ಟೋರೆಂಟ್‌ಗಳು, ಡಿನ್ನರ್ ಕ್ರೂಸ್, |
| ಜ಼ವಿಕಾನ್ ದ್ವೀಪ ಕೆನಡಾ | ಅವಳಿ ದ್ವೀಪಗಳು,  ಕೇವಲ 32 ಅಡಿಯ ಸೇತುವೆ |
| ಅಂತರರಾಷ್ಟ್ರೀಯ ಸೇತುವೆ | ಕೆನಡಾ/ಅಮೆರಿಕಾ ದೇಶಗಳ ನಡುವಿನ ಸೇತುವೆ. ಪಾದಚಾರಿ ಮಾರ್ಗವಿದೆ. |

## ಕೆಲವು ದ್ವೀಪ ರಾಷ್ಟ್ರಗಳು

| ರಾಷ್ಟ್ರಗಳು | ದ್ವೀಪಗಳ ಸಂಖ್ಯೆ |
|---|---|
| ಇಂಡೋನೇಷ್ಯಾ | 17508 |
| ಫಿಲಿಪ್ಪೀನ್ಸ್ | 7107 |
| ಜಪಾನ್ | 6852 |
| ಮಾಲ್ಡೀವ್ಸ್ | 1192 |
| ಮಲೇಷ್ಯಾ | 878 |

ಕಾಲ ಕಳೆಯಬಹುದು. ದಿನನಿತ್ಯದ ಎಲ್ಲ ಜಂಜಾಟಗಳನ್ನೂ ಮರೆತು ಕೇವಲ ಹೆಂಡತಿ, ಮಕ್ಕಳ ಜತೆಗೆ ಕಾಲ ಕಳೆಯಬಹುದು.

ನೀವು ಕ್ರೀಡಾ ಪ್ರೇಮಿಗಳಾಗಿದ್ದರೆ ಇಲ್ಲಿ ನಿಮಗಿಷ್ಟವಾಗುವ ಅನೇಕ ಸಾಹಸ ಮತ್ತು ಜಲಕ್ರೀಡೆಗಳಿವೆ. ಅಥವಾ ಈ ಕ್ರೀಡೆಗಳನ್ನು ಕಲಿಯುವ ಆಸಕ್ತಿ ಇದ್ದರೆ ಅದಕ್ಕೂ ಇಲ್ಲಿ ವ್ಯವಸ್ಥೆಯಿದೆ. ನೀವು ಗಾಲ್ಫ್ ಪ್ರೇಮಿಗಳೇ? ಇಲ್ಲಿ ಗಾಲ್ಫ್ ಕ್ಲಬ್, ರೆಸಾರ್ಟ್‌ಗಳಿರುವ ಅನೇಕ ದ್ವೀಪಗಳಿವೆ. ಹಾಗೆಯೇ ಇಲ್ಲಿ ನೀವು ತಣ್ಣಗೆ ಕುಳಿತು ಮೀನು ಹಿಡಿಯಬಹುದು. ನೀವೇ ಹಿಡಿದ ಮೀನು ಇತ್ಯಾದಿಗಳಿಂದ ರುಚಿಕರ ಬಾರ್ಬಿಕ್ಯು ಮಾಡಬಹುದು. ಒಂದು ವೇಳೆ ಬಂಗಲೆಯಲ್ಲಿ ಅಡುಗೆ ಮಾಡಲು ಆಲಸ್ಯವೇ ಅಥವಾ ಒಂದೇ ರೆಸ್ಟೋರೆಂಟಿನ ತಿಂಡಿ ತಿನಿಸು ಬೇಸರವಾಯಿತೇ? ಚಿಂತೆಯಿಲ್ಲ, ಸುತ್ತಮುತ್ತಲಿನ ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ವೈವಿಧ್ಯಮಯ ಅಂತರಾಷ್ಟ್ರೀಯ ಅಡುಗೆಗಳನ್ನು ಆಸ್ವಾದಿಸಬಹುದು. ಅಲೆಕ್ಸಾಂಡ್ರಿಯ ನಗರದ ಸಮೀಪ ಭಾರತೀಯ ಶೈಲಿಯ ರೆಸ್ಟೋರೆಂಟ್ ಕೂಡಾ ಇದೆ.

ಈ ದ್ವೀಪಗಳಿಗೆ ಕೆನಡಾ ಮತ್ತು ಅಮೆರಿಕಾ ದೇಶಗಳ ಎರಡೂ ಕಡೆಯಿಂದ ಪ್ರವೇಶ ಅವಕಾಶ ಇರುವುದರಿಂದ ನ್ಯೂಯಾರ್ಕ್ ಅಥವಾ ನ್ಯೂಜೆರ್ಸಿಯಿಂದ ಹಡಗಿನಲ್ಲಿ, ಖಾಸಗೀ ವಾಹನಗಳಲ್ಲಿ ಬರಬಹುದು. ಟೊರೆಂಟೊ, ಒಟ್ಟಾವ ನಗರಗಳಿಂದಲೂ ಸುಲಭವಾಗಿ ತಲಪಬಹುದು. ರಸ್ತೆ, ರೈಲು, ಮತ್ತಿತರ ಮೂಲಭೂತ ವ್ಯವಸ್ಥೆಗಳ ಉತ್ತಮ ಸಂಪರ್ಕವಿರುವುದರಿಂದ, ಥೌಸೆಂಡ್ ಐಲ್ಯಾಂಡ್ಸ್ ಪ್ರದೇಶವನ್ನು ತಲುಪಲು ಎರಡೂ ದೇಶಗಳ ನಿವಾಸಿಗಳಿಗೂ ಮತ್ತು ಪ್ರವಾಸಿಗಳಿಗೂ ಅನುಕೂಲ.

ನಿಮ್ಮಲ್ಲಿ ಎರಡೂ ದೇಶಗಳ ವೀಸಾ ಇದ್ದರೆ ಒಳ್ಳೆಯದು; ಒಂದೇ ದೇಶದ್ದು



## 1000 ದ್ವೀಪಗಳ ಆಕರ್ಷಣೆಗಳು

| | |
|---|---|
| ಹಾರ್ಟ್ ಐಲ್ಯಾಂಡ್ ಅಮೆರಿಕಾ | ಬೋಲ್ಟ್ ಕ್ಯಾಸೆಲ್, ಇಟಾಲಿಯನ್ ಉದ್ಯಾನವನ, ಪವರ್ ಹೌಸ್, |
| ಕ್ಲೆಟನ್ ಅಮೆರಿಕಾ | ಬೋಟ್ ಮ್ಯೂಸಿಯಮ್, 1000 ಐಲಾಂಡ್ಸ್ ಮ್ಯೂಸಿಯಮ್, ಆರ್ಟ್ ಸೆಂಟರ್, |
| ಬ್ರೊಕ್‌ವಿಲ್ ಕೆನಡಾ | ಜಲ ಕ್ರೀಡೆಗಳು, ಗಾಲ್ಫ್, ಪ್ರಾಚೀನ ಕಲಾಕೃತಿಗಳು |
| ಗನನೋಕ್ವೆ ಕೆನಡಾ | ಜಲ ಕ್ರೀಡೆಗಳು, ನಾಟಕಗಳು, ಗಾಲ್ಫ್, ಕ್ಯಾಸಿನೊ, ಬೋಲ್ಟ್ ಕ್ಯಾಸೆಲ್ ಪ್ರವಾಸ |
| ಅಲೆಕ್ಸಾಂಡ್ರಿಯ ಅಮೆರಿಕಾ | ಬೋಟಿಂಗ್, ಹೆಲಿಕಾಪ್ಟರ್ ಸವಾರಿಗಳು, ಬೋಲ್ಟ್ ಕ್ಯಾಸೆಲ್ ಪ್ರವಾಸ, ಟೆನಿಸ್, ರೆಸ್ಟೋರೆಂಟ್‌ಗಳು |
| ಕಿಂಗ್‌ಸ್ಟನ್ ಕೆನಡಾ | ಬೋಟಿಂಗ್, ಟ್ರಾಲಿ ಟೂರ್, ಫ್ರೋರ್ಟ್ ಹೆನ್ರಿ, ರೆಸ್ಟೋರೆಂಟ್‌ಗಳು, ಡಿನ್ನರ್ ಕ್ರೂಸ್, |
| ಜ಼ವಿಕಾನ್ ದ್ವೀಪ ಕೆನಡಾ | ಅವಳಿ ದ್ವೀಪಗಳು,  ಕೇವಲ 32 ಅಡಿಯ ಸೇತುವೆ |
| ಅಂತರರಾಷ್ಟ್ರೀಯ ಸೇತುವೆ | ಕೆನಡಾ/ಅಮೆರಿಕಾ ದೇಶಗಳ ನಡುವಿನ ಸೇತುವೆ. ಪಾದಚಾರಿ ಮಾರ್ಗವಿದೆ. |

## ಕೆಲವು ದ್ವೀಪ ರಾಷ್ಟ್ರಗಳು

| ರಾಷ್ಟ್ರಗಳು | ದ್ವೀಪಗಳ ಸಂಖ್ಯೆ |
|---|---|
| ಇಂಡೋನೇಷ್ಯಾ | 17508 |
| ಫಿಲಿಪ್ಪೀನ್ಸ್ | 7107 |
| ಜಪಾನ್ | 6852 |
| ಮಾಲ್ಡೀವ್ಸ್ | 1192 |
| ಮಲೇಷ್ಯಾ | 878 |

ಕಾಲ ಕಳೆಯಬಹುದು. ದಿನನಿತ್ಯದ ಎಲ್ಲ ಜಂಜಾಟಗಳನ್ನೂ ಮರೆತು ಕೇವಲ ಹೆಂಡತಿ, ಮಕ್ಕಳ ಜತೆಗೆ ಕಾಲ ಕಳೆಯಬಹುದು.

ನೀವು ಕ್ರೀಡಾ ಪ್ರೇಮಿಗಳಾಗಿದ್ದರೆ ಇಲ್ಲಿ ನಿಮಗಿಷ್ಟವಾಗುವ ಅನೇಕ ಸಾಹಸ ಮತ್ತು ಜಲಕ್ರೀಡೆಗಳಿವೆ. ಅಥವಾ ಈ ಕ್ರೀಡೆಗಳನ್ನು ಕಲಿಯುವ ಆಸಕ್ತಿ ಇದ್ದರೆ ಅದಕ್ಕೂ ಇಲ್ಲಿ ವ್ಯವಸ್ಥೆಯಿದೆ. ನೀವು ಗಾಲ್ಫ್ ಪ್ರೇಮಿಗಳೇ? ಇಲ್ಲಿ ಗಾಲ್ಫ್ ಕ್ಲಬ್, ರೆಸಾರ್ಟ್‌ಗಳಿರುವ ಅನೇಕ ದ್ವೀಪಗಳಿವೆ. ಹಾಗೆಯೇ ಇಲ್ಲಿ ನೀವು ತಣ್ಣಗೆ ಕುಳಿತು ಮೀನು ಹಿಡಿಯಬಹುದು. ನೀವೇ ಹಿಡಿದ ಮೀನು ಇತ್ಯಾದಿಗಳಿಂದ ರುಚಿಕರ ಬಾರ್ಬಿಕ್ಯು ಮಾಡಬಹುದು. ಒಂದು ವೇಳೆ ಬಂಗಲೆಯಲ್ಲಿ ಅಡುಗೆ ಮಾಡಲು ಆಲಸ್ಯವೇ ಅಥವಾ ಒಂದೇ ರೆಸ್ಟೋರೆಂಟಿನ ತಿಂಡಿ ತಿನಿಸು ಬೇಸರವಾಯಿತೇ? ಚಿಂತೆಯಿಲ್ಲ, ಸುತ್ತಮುತ್ತಲಿನ ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ವೈವಿಧ್ಯಮಯ ಅಂತರಾಷ್ಟ್ರೀಯ ಅಡುಗೆಗಳನ್ನು ಆಸ್ವಾದಿಸಬಹುದು. ಅಲೆಕ್ಸಾಂಡ್ರಿಯ ನಗರದ ಸಮೀಪ ಭಾರತೀಯ ಶೈಲಿಯ ರೆಸ್ಟೋರೆಂಟ್ ಕೂಡಾ ಇದೆ.

ಈ ದ್ವೀಪಗಳಿಗೆ ಕೆನಡಾ ಮತ್ತು ಅಮೆರಿಕಾ ದೇಶಗಳ ಎರಡೂ ಕಡೆಯಿಂದ ಪ್ರವೇಶ ಅವಕಾಶ ಇರುವುದರಿಂದ ನ್ಯೂಯಾರ್ಕ್ ಅಥವಾ ನ್ಯೂಜೆರ್ಸಿಯಿಂದ ಹಡಗಿನಲ್ಲಿ, ಖಾಸಗೀ ವಾಹನಗಳಲ್ಲಿ ಬರಬಹುದು. ಟೊರೆಂಟೊ, ಒಟ್ಟಾವ ನಗರಗಳಿಂದಲೂ ಸುಲಭವಾಗಿ ತಲಪಬಹುದು. ರಸ್ತೆ, ರೈಲು, ಮತ್ತಿತರ ಮೂಲಭೂತ ವ್ಯವಸ್ಥೆಗಳ ಉತ್ತಮ ಸಂಪರ್ಕವಿರುವುದರಿಂದ, ಥೌಸೆಂಡ್ ಐಲ್ಯಾಂಡ್ಸ್ ಪ್ರದೇಶವನ್ನು ತಲುಪಲು ಎರಡೂ ದೇಶಗಳ ನಿವಾಸಿಗಳಿಗೂ ಮತ್ತು ಪ್ರವಾಸಿಗಳಿಗೂ ಅನುಕೂಲ.

ನಿಮ್ಮಲ್ಲಿ ಎರಡೂ ದೇಶಗಳ ವೀಸಾ ಇದ್ದರೆ ಒಳ್ಳೆಯದು; ಒಂದೇ ದೇಶದ್ದು